**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.**

ಸಿ.ಸಿ ನಂಬರ್ಃ **1979/2023**

ಪಿರ್ಯಾದಿ : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

ಆರೋಪಿ : ಮಹಮ್ಮದ್ ರಫೀಕ್ ಬಿನ್ ಅಬೂಬಕರ್,
ವಯಸ್ಸು ಸುಮಾರು 40 ವರ್ಷ,
ವಾಸಃ ಕುಪ್ಪೆಟ್ಟಿ ಕಲ್ಮನೆ ಉರುವಲು
ಗ್ರಾಮ, ಕಳೆಂಜ ಅಂಚೆ, ಬೆಳ್ತಂಗಡಿ ತಾಲ್ಲೂಕು,
ದ.ಕ. ಜಿಲ್ಲೆ.

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆಃ 2) ಫ್ರಾಸಾ-1 ಶ್ರೀಹರಿ ರವರು ತಮ್ಮ ಸಾಕ್ಷ್ಯದಲ್ಲಿ ದಿ.12.05.2023 ರಂದು ಚಾಸಾ-8 ರವರು ಅವರಿಗೆ ಕರೆ ಮಾಡಿ ಮಂಜುನಾಥ್ ರವರಿಗೆ ಅಪಘಾತವಾಗಿದೆ ಎಂದು ಬಣಕಲ್ ಪೋಲಿಸರು ಹೇಳಿದರು ಎಂದು ತಿಳಿಸಿದ್ದು, ನಂತರ ಅವರು ದಾವಣಗೆರೆಯಿಂದ ಬಣಕಲ್ ಪೋಲಿಸ್ ಠಾಣೆಗೆ ಬಂದಾಗ ಪೊಲಿಸರು ಅವರನ್ನು ಮೂಡಿಗೆರೆ ಆಸ್ಪತ್ರೆಯ ಶವಗಾರಕ್ಕೆ ಕರೆದುಕೊಂಡು ಹೋಗಿ ಮೃತ ಮಂಜುನಾಥ್ ರವರ ಮೃತದೇಹವನ್ನು ಗುರುತಿಸುವಂತೆ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ KA-21-C-4813 ವಾಹನವು ಮಂಜುನಾಥ್ ರವರಿಗೆ ಅಪಘಾತಪಡಿಸಿದೆ ಎಂದು ಅವರಿಗೆ ತಿಳಿಸಿದ್ದು, ಈ ಬಗ್ಗೆ ದೂರು ದಾಖಲಿಸಿರುವುದಾಗಿ, ಆದಾದ 5 ದಿನದ ನಂತರ ಪೋಲಿಸರು ನನಗೆ ಕರೆ ಮಾಡಿ

ಅಪಘಾತ ಪಡಿಸಿದ ಲಾರಿ ಸಿಕ್ಕಿದೆ ಎಂದು ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 4) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದಾದ 5 ದಿನಗಳ ನಂತರ ಅಂದರೆ ದಿ.22.05.2023 ರಂದು ಅವರು ಪೋಲಿಸ್ ಠಾಣೆಗೆ ಹೋದಾಗ ಅಲ್ಲಿ ಪೋಲಿಸರು ಲಾರಿ ತೋರಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 5) ಫ್ರಾಸಾ-4 ರಘು ಪಿ.ಎಸ್. ಮತ್ತು ಫ್ರಾಸಾ-5 ರನ್ನಗೌಡ ಪಾಟೀಲ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.11.05.2023 ರಂದು ಅವರುಗಳು ರಾತ್ರಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಬೆಳಗ್ಗಿನ ಜಾವ ಮತ್ತಿಕಟ್ಟೆ ಸರ್ಕಲ್ ಬಳಿ NH-73 ರಸ್ತೆಯಲ್ಲಿ ಒಬ್ಬ ವ್ಯಕ್ತಿ ಬಿದ್ದಿರುವುದು ಕಂಡುಬಂದಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 6) ಫ್ರಾಸಾ-4 ಮತ್ತು 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರುಗಳು ಜೀಪನ್ನು ನಿಲ್ಲಿಸಿ ಸದರಿ ವ್ಯಕ್ತಿಯ ಹತ್ತಿರ ಹೋಗಿ ನೋಡಿದಾಗ, ಆತ ಮೃತನಾಗಿದ್ದು ಯಾವುದೋ ವಾಹನದ ಚಾಲಕನು ಆತನಿಗೆ ಡಿಕ್ಕಿ ಪಡಿಸಿಕೊಂಡು ಹೋಗಿರುವ ಕಾರಣ ರಕ್ತಗಾಯವಾಗಿ ಮೃತಪಟ್ಟಿರುವುದು ತಿಳಿಯಿತು, ನಂತರ ಠಾಣೆಗೆ ವಿಚಾರ ತಿಳಿಸಿ ಮೃತನ ಜೇಬನ್ನು ಪರಿಶೀಲಿಸಿದಾಗ ಅವರ ಆಧಾರ್ ಕಾರ್ಡ್ ಮತ್ತು ಪೋಟೋ ದೊರಕಿದ್ದು, ಆತ ರಾಯಚೂರಿನ ತೋರಣದಿಣ್ಣೆಯ ಮಂಜುನಾಥ ಎಂದು ತಿಳಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 7) ಫ್ರಾಸಾ-4 ಮತ್ತು 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿಯವರ ಸಂಬಂಧಿಕರ ವಿಚಾರವನ್ನು ಹುಡುಕಿದಾಗ ಮೃತರ ತಂಗಿ ಶ್ರೀದೇವಿ ಎನ್ನುವವರ ಪೋನ್ ನಂಬರ್ ಸಿಕ್ಕಿದ್ದು ಸದರಿರವರಿಗೆ ವಾಟ್ಸಾಪ್ ಮೂಲಕ ಮೃತರ ಪೊಟೋವನ್ನು

ಕಳುಹಿಸಿದ್ದು ಅವರು ಮೃತರನ್ನು ಗುರುತಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 8) ಫ್ರಾಸಾ-4 ಮತ್ತು 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮೃತ ದೇಹವನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿ, ಮರುದಿನ ಮೃತರ ಸಂಬಂಧಿಕರಾದ ಶ್ರೀಹರಿ ಎನ್ನುವವರು ಠಾಣೆಗೆ ಹಾಜರಾಗಿ ದೂರು ನೀಡಿದ್ದಾರೆ ಎಂದು ಅವರಿಗೆ ತಿಳಿಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 9) ಫ್ರಾಸಾ-4 ಮತ್ತು 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.14.05.2023 ರಂದು ಚಾಸಾ-18 ರವರು ಸ್ಥಳ ಪಂಚನಾಮೆಗೆ ಬಂದಾಗ ಚಾಸಾ-6 ರವರು ದಿ.12.05.2023 ರಂದು ಅವರು ಮನೆಯಿಂದ ಮಸೀದಿಗೆ ಹೋಗುವಾಗ KA-21-C-4813 ಲಾರಿ ಚಾಲಕನು ಅತೀವೇಗವಾಗಿ ವಾಹನ ಚಲಾವಣೆ ಮಾಡಿಕೊಂಡು ಬಂದು ಮೃತ ಮಂಜುನಾಥ ರವರಿಗೆ ಡಿಕ್ಕಿ ಪಡಿಸಿರುವುದಾಗಿ ಚಾಸಾ-18 ರವರ ಸಮಕ್ಷಮ ಹೇಳಿರುತ್ತಾರೆ, ನಂತರ ಅವರ ಹೇಳಿಕೆಯನ್ನು ಚಾಸಾ-18 ರವರ ಸಮಕ್ಷಮ ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 10) ಫ್ರಾಸಾ-9 ವನಿತಾ ಎಂ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ 12.05.2023 ರಂದು ಚಾಸಾ-1 ರವರು ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂ.51/2023 ರಂತೆ ಕಲಂ 279, 304(ಎ) ಐಪಿಸಿ ಮತ್ತು 187 ಐಎಂವಿ ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಕಡತವನ್ನು ಚಾಸಾ-15 ರವರ ಮುಖೇನ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 11) ಫ್ರಾಸಾ-10 ಸೋಮೇಗೌಡ ಪಿ. ರವರು ತಮ್ಮ ಸಾಕ್ಷ್ಯದಲ್ಲಿ ದಿ.12.05.2023 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-17 ರವರಿಂದ

ಪಡೆದುಕೊಂಡು, ಪರಿಶೀಲಿಸಿ, ಅದೇ ದಿನ ಮತ್ತೊಂದು ಕ್ರೈ ನಂ.52/2023 ರ ತನಿಖೆಯಲ್ಲಿ ಇದ್ದ ಕಾರಣ, ಪ್ರಸ್ತುತ ಪ್ರಕರಣದಲ್ಲಿ ಶವ ತನಿಖೆಯನ್ನು ಚಾಸಾ-17 ರವರೇ ಮುಂದುವರೆಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 12) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 13.05.2023 ರಂದು ಪ್ರಸ್ತುತ ಪ್ರಕರಣದಲ್ಲಿ ಅಪಘಾತಕ್ಕೊಳಗಾದ ವಾಹನ ಮತ್ತು ಆರೋಪಿಯ ಪತ್ತೆಯ ಕುರಿತು ಬಣಕಲ್ ಠಾಣೆಯ ಸಿಬ್ಬಂದಿಯಾದ ಮೆಹಬೂಬ್ ಎಂಬುವವರಿಗೆ ಸಿಸಿಟಿವಿ ಕ್ಯಾಮೆರಾವನ್ನು ಪರಿಶೀಲಿಸಿ ವರದಿ ನೀಡುವಂತೆ ಜ್ಞಾಪನವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 13) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಅವರು ವೃತ್ತ ಕಛೇರಿಯಲ್ಲಿ ಇದ್ದ ಸಮಯದಲ್ಲಿ ಸಿಬ್ಬಂದಿ ಮೆಹಬೂಬ್ ರವರು ಬಣಕಲ್ ಗ್ರಾಮದ ಮತ್ತಿಕಟ್ಟೆ ವೃತ್ತದಲ್ಲಿರುವ ಜಾಮೀಯ ಮಸೀದಿಯಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮೆರಾವನ್ನು ಪರಿಶೀಲಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 14) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 12.05.2023 ರಂದು ರಾತ್ರಿ ಸಮಯದಲ್ಲಿ ಕೊಟ್ಟಿಗೆಹಾರದ ಕಡೆಯಿಂದ ಬಂದ ಕೆಎ-21-ಸಿ-4813 ಈಚರ್ ಲಾರಿಯ ಚಾಲಕನು, ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯನ್ನು ದಾಟುತ್ತಿದ್ದ ಮಂಜುನಾಥ್ ಎಂಬುವವರಿಗೆ ಡಿಕ್ಕಿ ಹೊಡೆಸಿ, ಮೈ ಮೇಲೆ ಲಾರಿಯನ್ನು ಹತ್ತಿಸಿ, ಸದರಿ ವ್ಯಕ್ತಿಯು ತೀವ್ರ ಗಾಯದಿಂದ ಮೃತ ಪಟ್ಟಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 15) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಸಿಸಿ

ಕ್ಯಾಮೆರಾದ ಫುಟೇಜ್ ನ್ನು ಯತಾವತ್ತಾಗಿ ಸ್ಯಾನ್ ಡಿಸ್ಕ್ ಹೆಸರಿನ 65 ಜಿ.ಬಿ. ಪೆನ್ ಡ್ರೈವ್ ಗೆ ಅಳವಡಿಸಿ, ಸದರಿ ಪೆನ್ ಡ್ರೈವ್ ನಿಂದ ಕಂಪ್ಯೂಟರ್ ಗೆ ಅಳವಡಿಸಿ, ಸಿಡಿ ಡಿಸ್ಕ್ ಗೆ ವರ್ಗಾಯಿಸಿ, ವರದಿಯನ್ನು ತಯಾರು ಮಾಡಿ ಹಾಜರುಪಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 16) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಮೆಹಬೂಬ್ ಎಂಬ ಸಿಬ್ಬಂದಿಯಿಂದ ಕಲಂ 65 ಬಿ ರಡಿಯಲ್ಲಿ ದೃಢೀಕೃತ ಪ್ರತಿಯನ್ನು ಪಡೆದುಕೊಂಡು, ದಿಃ 14.05.2023 ರಂದು ತನಿಖೆಯನ್ನು ಮುಂದುವರೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 17) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಂತರ ಅವರು ಮತ್ತು ತನಿಖಾ ಸಹಾಯಕರಾದ ಮನು ಕೆ.ಎಸ್. ಎಂಬ ಸಿಬ್ಬಂದಿಯವರೊಂದಿಗೆ ಬಣಕಲ್ ನ ಮತ್ತಿಕಟ್ಟೆ ವೃತ್ತದ ಬಳಿ ಭೇಟಿ ಮಾಡಿ, ಅಪಘಾತ ಸಂಭವಿಸಿದ ಸ್ಥಳದಲ್ಲಿ ಶವವನ್ನು ಮೊದಲು ನೋಡಿದ ಚಾಸಾ-11 ರವರನ್ನು ಸ್ಥಳಕ್ಕೆ ಕರೆಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 18) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-5 ಮತ್ತು 6 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು, ಪ್ರಕರಣದ ಮಾಹಿತಿ ತಿಳಿಸಿ, ನೋಟೀಸು ಜಾರಿ ಮಾಡಿ, ಚಾಸಾ-10 ಮತ್ತು 11 ರವರು ಶವವು ಬಿದ್ದ ಸ್ಥಳವನ್ನು ತೋರಿಸಿದ ಮೇರೆಗೆ, ಚಾಸಾ-5 ಮಕತ್ತು 6 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 19) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಕಚ್ಚಾ ನಕಾಶೆ ಮತ್ತು ಪೋಟೋಗಳನ್ನು ತೆಗೆದು, ಚಾಸಾ-10 ಮತ್ತು 11 ರವರ ಹೇಳಿಕೆಯನ್ನು ಪಡೆದು,

ಸಿಸಿ ಕ್ಯಾಮೆರಾ ಪರಿಶೀಲನೆಯಿಂದ ಕಂಡುಬಂದ ಅಪಘಾತ ಮಾಡಿರುವ ಕೆಎ-21-ಸಿ-4813 ಈಚರ್ ಲಾರಿಯ ಬಿ ಎಕ್ಸಾಟ್ರಾಕ್ಟ್ ಪಡೆದುಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 20) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ16.05.2023 ರಂದು ಚಾಸಾ-9 ರವರಿಗೆ ಸದರಿ ವಾಹನದ ದಾಖಲಾತಿ ಕೋರಿ ನೋಟೀಸು ಜಾರಿ ಮಾಡಿ, ದಿಃ 17.05.2023 ರಂದು ಚಾಸಾ-9 ರವರಿಗೆ ಕಲಂ 133 ರಡಿಯಲ್ಲಿ ನೋಟೀಸು ಜಾರಿ ಮಾಡಿ, ಅದೇ ದಿನ ಚಾಸಾ-9 ರವರಿಂದ ನೋಟೀಸಿಗೆ ಉತ್ತರವನ್ನು ಪಡೆದುಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 21) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅಪಘಾತಪಡಿಸಿದ ಕೆಎ-21-ಸಿ-4813 ಈಚರ್ ಲಾರಿಯನ್ನು ಚಾಸಾ-5 ಮತ್ತು 6 ರವರ ಸಮಕ್ಷಮ ಬಣಕಲ್ ಠಾಣೆಯ ಆವರಣದಲ್ಲಿ ಅಮಾನತುಪಡಿಸಿಕೊಂಡು, ನಂತರ ಆರೋಪಿಯಾದ ನಿಮಗೆ ಕಲಂ 41ಎ ರಡಿಯಲ್ಲಿ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 22) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡು, ಅಮಾನತುಪಡಿಸಿಕೊಂಡ ಲಾರಿಯನ್ನು ಠಾಣಾ ಮಾಲು ಪಟ್ಟಿ ಸಂ.29/2023 ರಡಿಯಲ್ಲಿ ನಮೂದಿಸಲಾಗಿ, ನ್ಯಾಯಾಲಯಕ್ಕೆ ಮನವಿಯನ್ನು ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 23) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಷ್ಟ ಭರ್ತಿ ಪರಿಹಾರ ಪ್ರತಿಯನ್ನು ಪಡೆದುಕೊಂಡು, ದಿಃ 19.05.2023 ರಂದು ಅಮಾನತುಪಡಿಸಿಕೊಂಡ ವಾಹನದ ಕುರಿತು ವರದಿ ಕೋರಿ ಚಾಸಾ-13 ರವರಿಗೆ ಮನವಿ

ಪತ್ರ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 24) ಫ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 22.05.2023 ರಂದು ಚಾಸಾ-7 ಮತುತ 8 ರವರ ಹೇಳಿಕೆಯನ್ನು ಪಡೆದುಕೊಂಡು, ದಿಃ 26.06.2023 ರಂದು ವೃತರ ಮರಣೋತ್ತರ ವರದಿಯನ್ನು ಚಾಸಾ-12 ರವರಿಂದ ಪಡೆದುಕೊಂಡು, ದಿಃ 19.08.2023 ರಂದು ಚಾಸಾ-13 ರವರಿಂದ ಐಎಂವಿ ವರದಿ ಪಡೆದುಕೊಂಡು, ತನಿಖೆ ಮುಕ್ತಾಯಗೊಂಡು ಆರೋಪಿಯಾದ ನಿಮ್ಮ ವಿರುದ್ಧ ಆರೋಪವು ಸಾಬೀತಾದ ಕಾರಣ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ

ಪ್ರಶ್ನೆಃ 25) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ?

ಆರೋಪಿಯ ಉತ್ತರಃ

ಪ್ರಶ್ನೆಃ 26) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಆರೋಪಿಯ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-

ಮೂಡಿಗೆರೆ
ದಿನಾಂಕಃ 08.01.2026.

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.